<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ಸದಸ್ಯರ ಹೆಸರು** | **:** | **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **855** |
| **ಉತ್ತರಿಸಬೇಕಾದ ದಿನಾಂಕ** | **:** | **13.12.2023** |
| **ಉತ್ತರಿಸಬೇಕಾದ ಸಚಿವರು** | **:** | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

| ಕ್ರ. ಸಂ. | **ಪಶ್ನೆ** | **ಉತ್ತರ** |
|---|---|---|
| ಅ) | ರಾಜ್ಯದಲ್ಲಿ ಪಶು ಸಂಗೋಪನಾ ಇಲಾಖೆಯ ಕಾರ್ಯಕ್ರಮಗಳಾವುವು; ಇಲಾಖೆಯ ಕಾರ್ಯಕ್ರಮ ಅನುಷ್ಠಾನದ ಮಾನದಂಡಗಳೇನು; (ವಿವರ ನೀಡುವುದು) | 2023-24 ನೇ ಸಾಲಿನಲ್ಲಿ ಪಶು ಸಂಗೋಪನೆ ಇಲಾಖೆಯ ವತಿಯಿಂದ ರೈತರಿಗಾಗಿ ರೂಪಿಸಲಾಗಿರುವ ಯೋಜನೆಗಳು ಹಾಗೂ ಸೌಲಭ್ಯಗಳ ವಿವರಗಳನ್ನು **ಅನುಬಂಧ-1 ರಲ್ಲಿ ನೀಡಲಾಗಿದೆ**.<br><br>ಇಲಾಖೆಯ ಕಾರ್ಯಕ್ರಮ ಅನುಷ್ಠಾನದ ಮಾನದಂಡಗಳು ಈ ಕೆಳಕಂಡಂತಿರುತ್ತವೆ:<br><br>• ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತ್ತು ಇತರೆ ಜನಾಂಗದ ಕೂಲಿ ಕೃಷಿ ಕಾರ್ಮಿಕರು ಭೂರಹಿತರು ಮತ್ತು ಆರ್ಥಿಕವಾಗಿ ಹಿಂದುಳಿದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.<br><br>• ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3), ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.<br><br>• ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳು RD No. ಇರುವ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು.<br><br>• ಇತರೆ ಜನಾಂಗದ ಫಲಾನುಭವಿಗಳು ಬಿ.ಪಿ.ಎಲ್ ಕಾರ್ಡ್ ಕಡ್ಡಾಯವಾಗಿ ಹೊಂದಿರಬೇಕು.<br><br>• ಅರ್ಜಿದಾರರು FRUITS ತಂತ್ರಾಂಶದಲ್ಲಿ ನೋಂದಾಯಿಸಿರಬೇಕು.<br><br>• ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. |

<table>
<tr>
<td>ಆ)</td>
<td>ರಾಜ್ಯದಲ್ಲಿ ಅಂತಿಮವಾಗಿ ಜಾನುವಾರು ಗಣತಿ ಯಾವಾಗ ಮಾಡಲಾಗಿತ್ತು; ಜಾನುವಾರುಗಳ ಸಂಖ್ಯೆಗಳ ನಿರ್ಧಿಷ್ಟ ಮಾಹಿತಿಯಿಲ್ಲದೆ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಮುಂದಿನ ಜಾನುವಾರು ಗಣತಿಯನ್ನು ಯಾವಾಗ ಮಾಡಲಾಗುವುದು; (ವಿವರ ನೀಡುವುದು)</td>
<td>ರಾಜ್ಯದಲ್ಲಿ ಅಂತಿಮವಾಗಿ ಜಾನುವಾರು ಗಣತಿಯನ್ನು 2019 ರಲ್ಲಿ ಮಾಡಲಾಗಿದೆ.<br><br>ಹೌದು, ಬಂದಿದೆ. ಭಾರತ ಸರ್ಕಾರದ ಮಾರ್ಗಸೂಚಿಯಂತೆ ಪ್ರತಿ ಐದು ವರ್ಷಗಳಿಗೊಮ್ಮೆ ಜಾನುವಾರು ಗಣತಿ ನಡೆಸಲಾಗುತ್ತಿದೆ.<br><br>2019 ರಲ್ಲಿ ನಡೆದ 20ನೇ ಜಾನುವಾರು ಗಣತಿಯ ಪ್ರಕಾರ ರಾಜ್ಯದಲ್ಲಿ ಜಾನುವಾರುಗಳ ಸಂಖ್ಯೆ ಕೆಳಕಂಡಂತಿರುತ್ತದೆ:<br><br>
<table>
<tr><th>ಕ್ರ. ಸಂ</th><th>ಜಾನುವಾರುಗಳು</th><th>ಸಂಖ್ಯೆ</th></tr>
<tr><td>1</td><td>ದನ</td><td>8469004</td></tr>
<tr><td>2</td><td>ಎಮ್ಮೆ</td><td>2984560</td></tr>
<tr><td>3</td><td>ಕುರಿ</td><td>11050728</td></tr>
<tr><td>4</td><td>ಮೇಕೆ</td><td>6169392</td></tr>
<tr><td>5</td><td>ಹಂದಿ</td><td>323836</td></tr>
<tr><td>6</td><td>ನಾಯಿ</td><td>1288864</td></tr>
<tr><td>7</td><td>ಕುದುರೆ ಮತ್ತು ಪೋನಿ</td><td>7018</td></tr>
<tr><td>8</td><td>ಹೇಸರಗತ್ತೆ</td><td>51</td></tr>
<tr><td>9</td><td>ಕತ್ತೆ</td><td>8790</td></tr>
<tr><td>10</td><td>ಮೊಲ</td><td>29200</td></tr>
<tr><td>11</td><td>ಒಂಟೆ</td><td>33</td></tr>
<tr><td>12</td><td>ಆನೆ</td><td>77</td></tr>
<tr><td colspan="2">ಒಟ್ಟು ಜಾನುವಾರುಗಳು</td><td>30331553</td></tr>
<tr><td colspan="2">ಒಟ್ಟು ಕುಕ್ಕುಟ</td><td>59494481</td></tr>
</table>
<br>ಮುಂದಿನ 21ನೇ ಜಾನುವಾರು ಗಣತಿಯನ್ನು 2024 ರಲ್ಲಿ ಭಾರತ ಸರ್ಕಾರದಿಂದ ರಾಷ್ಟ್ರಾದ್ಯಂತ ಏಕಕಾಲದಲ್ಲಿ ಹಮ್ಮಿಕೊಳ್ಳಲಾಗುತ್ತದೆ.</td>
</tr>
<tr>
<td>ಇ)</td>
<td>ರಾಜ್ಯದಲ್ಲಿ ವಿಶೇಷವಾಗಿ ಜಾನುವಾರುಗಳ ಕಾಲು ಬಾಯಿ ರೋಗ, ಗಂಟು ರೋಗ, ಸಾಕು ಪ್ರಾಣಿಗಳ ಮೆದುಳು ಜ್ವರ, (ಸಾಕು ನಾಯಿಗಳ) ವಿಷಪ್ರಾಷನ, ಕಾಡು ಪ್ರಾಣಿಗಳಿಂದ ದಾಳಿ ಪ್ರಕರಣಗಳು ಇತ್ಯಾದಿಗಳಿಂದ ನಷ್ಟವಾದ ಜಾನುವಾರು ಮಾಹಿತಿ ಇಲಾಖೆಯಲ್ಲಿದೆಯೇ; ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಈ ಮಾಹಿತಿಯನ್ನು ಸಂಗ್ರಹಿಸುವ ಬಗ್ಗೆ</td>
<td>• ಆರ್ಥಿಕ ಪ್ರಾಮುಖ್ಯತೆಯುಳ್ಳ ಪ್ರಮುಖ ಜಾನುವಾರು ರೋಗಗಳಾದ ಕಾಲು ಬಾಯಿ ರೋಗ, ಗಂಟಲು ಬೇನೆ, ನೆರಡಿ ರೋಗ, ಚಪ್ಪೆ ರೋಗ, ನೀಲಿ ನಾಲಿಗೆ ರೋಗ, ಕುರಿಗಳ ಕರುಳು ಬೇನೆ, ಹುಚ್ಚು ನಾಯಿ ರೋಗ ಮತ್ತು ಚರ್ಮಗಂಟು ರೋಗಗಳಿಂದ ಮರಣ ಹೊಂದಿದ ಜಾನುವಾರುಗಳ ಮಾಹಿತಿಯನ್ನು Integrated Livestock Information System (ILIS) ನಲ್ಲಿ ಪಡೆದು ನಿರ್ವಹಿಸಲಾಗುತ್ತಿದೆ.<br><br>• ಇಲಾಖೆಯು National Informatics Centre (NIC) ಸಹಯೋಗದೊಂದಿಗೆ ರಾಜ್ಯದ ಎಲ್ಲೆಡೆಯಿಂದ ಪಶುಪಾಲನಾ ಇಲಾಖೆಗೆ ಸಂಬಂಧಿಸಿದ</td>
</tr>
</table>

| | | |
|---|---|---|
| | ಇಲಾಖೆಯ ಕ್ರಮಗಳೇನು; (ವಿವರ ನೀಡುವುದು) | ಮಾಹಿತಿಯನ್ನು ಸಂಗ್ರಹಿಸುವ ವಿಶಿಷ್ಟವಾದ On Line System ಸಿದ್ಧಪಡಿಸಿದ್ದು, ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಿಂದ ಮಾಹಿತಿಯನ್ನು on line ನಲ್ಲಿ ಪಡೆಯಲಾಗುತ್ತಿದೆ.<br><br>• Information Network on Animal Productivity and Health (INAPH) ಈ ತಂತ್ರಾಂಶವನ್ನು ಉಪಯೋಗಿಸಿಕೊಂಡು ಜಾನುವಾರುಗಳ ಆರೋಗ್ಯ, ಪೌಷ್ಠಿಕತೆ ಹಾಗೂ ಸಂತಾನೋತ್ಪತ್ತಿಗಳ ಮಾಹಿತಿಯನ್ನು ಜಾನುವಾರು ಮಾಲೀಕರ ಮನೆಬಾಗಿಲಲ್ಲಿ ಪಡೆಯಬಹುದಾಗಿದೆ.<br><br>• Pashu Dhan App.<br>ಭಾರತ ಸರ್ಕಾರದಿಂದ ಇತ್ತೀಚಿಗೆ ಲೋಕಾರ್ಪಣೆಗೊಂಡ ಪಶುಧನ್ ಆಪ್ ಇನಾಫ್ ತಂತ್ರಾಂಶದ ಪರ್ಯಾಯ ಯೋಜನೆಯಾಗಿರುತ್ತದೆ.<br><br>• National Animal Disease Reporting System (NADRS)<br>ತಾಲ್ಲೂಕಿನ ಪಶುವೈದ್ಯ ಸಂಸ್ಥೆಗಳಲ್ಲಿ ದಿನ ನಿತ್ಯ ಸಂಶಯಾಸ್ಪದ ರೋಗಗ್ರಸ್ಥ ಜಾನುವಾರುಗಳ ಲಕ್ಷಣಗಳು ಕಂಡುಬಂದಲ್ಲಿ ಈ ತಂತ್ರಾಂಶದಲ್ಲಿ ನಮೂದಿಸಲಾಗುತ್ತಿದೆ. ಈ ತಂತ್ರಾಂಶವು ರೋಗೋದ್ರೇಕದ ಮುನ್ಸೂಚನೆ ನೀಡುವಲ್ಲಿ ಸಹಾಯಕವಾಗಿದೆ.<br><br>• Ear Tagging:<br>ಜಾನುವಾರುಗಳ ಗುರುತಿಸುವಿಕೆಗಾಗಿ ಕಿವಿಯೋಲೆಗಳನ್ನು ಅಳವಡಿಸಲಾಗುತ್ತಿದೆ.<br><br>• ರಾಜ್ಯದಲ್ಲಿರುವ 13 ರೋಗ ನಿರ್ಣಯ ಪ್ರಯೋಗಾಲಯಗಳು (RDDL) ಕಾರ್ಯನಿರ್ವಹಿಸುತ್ತಿದ್ದು, ಹೊಸದಾಗಿ 4 ರೋಗ ನಿರ್ಣಯ ಪ್ರಯೋಗಾಲಯಗಳ ಸೇಪರ್ಡೆಯೊಂದಿಗೆ ಇವುಗಳ ಸಂಖ್ಯೆಯನ್ನು 17 ಕ್ಕೆ ಏರಿಸಲಾಗಿದೆ |
| ಈ) | ಪಶುಸಂಗೋಪನೆ ಇಲಾಖೆಯಲ್ಲಿ ಅನುಮೋದನೆಯಾದ ಅಧಿಕಾರಿ/ಸಿಬ್ಬಂದಿ ಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಹುದ್ದೆಗಳು ಖಾಲಿಯಿದೆ ಹಾಗೂ ಭರ್ತಿಯಾಗಿರುವ ಹುದ್ದೆಗಳಲ್ಲಿ ಕೆಲವು ಅಧಿಕಾರಿಗಳು ನಿಯೋಜನೆಯಲ್ಲಿ ಇತರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದರಿಂದ | ಪಶುಪಾಲನಾ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳನ್ನು ಬೇರೆ ಇಲಾಖೆಗೆ ನಿಯೋಜನೆ ಮಾಡಿರುವುದಿಲ್ಲ. ಖಾಲಿ ಇರುವ ಪಶುವೈದ್ಯರ ಹುದ್ದೆಗಳಿಗೆ ಅಧಿಕ ಪ್ರಭಾರ ವ್ಯವಸ್ಥೆ ಮಾಡಿ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಸೇವೆ ನೀಡಲು ಕ್ರಮವಹಿಸಲಾಗಿದೆ.<br><br>ಇಲಾಖೆಯಲ್ಲಿ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ದಿನಾಂಕ:20-06-2023 ರಂದು |

| | | |
|---|---|---|
| | ಇಲಾಖೆಯ ನಿಗದಿತ ಕಾರ್ಯಕ್ರಮ ಅನುಷ್ಠಾನಕ್ಕೆ ತೊಂದರೆಯಾಗುವುದನ್ನು ಸರ್ಕಾರ ಗಮನಿಸಿದೆಯೇ; ಈ ಕುರಿತು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಇತ್ಯರ್ಥವಾದ ಕೂಡಲೇ ನ್ಯಾಯಾಲಯದ ಆದೇಶದನ್ವಯ ಕ್ರಮವಹಿಸಲಾಗುವುದು.<br><br>ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಆದೇಶ ಸಂಖ್ಯೆ: ಆಪಸಂ: ಸಿಬ್ಬಂದಿ; ಡಿ-1:ವಿವ-02;2022-23 ದಿನಾಂಕ:20-10-2023 ರಂತೆ 115 ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯನ್ನು ಭರ್ತಿ ಮಾಡಲಾಗಿದೆ.<br><br>ಹಿರಿಯ ಪಶುವೈದ್ಯಕೀಯ ಪರೀಕ್ಷಕರು ಮತ್ತು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಖಾಲಿ ಇರುವ ವಾಹನ ಚಾಲಕರ ಹುದ್ದೆಗಳಿಗೆದುರಾಗಿ 189 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲಾಗಿದೆ.<br><br>ಖಾಲಿ ಇರುವ 'ಡಿ' ದರ್ಜೆ ಹುದ್ದೆಗಳಿಗೆದುರಾಗಿ 2556 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲಾಗಿದೆ. |
| ಉ) | ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಿರುವ ಸಂಚಾರಿ ಪಶು ಚಿಕಿತ್ಸಾ ಘಟಕಗಳೆಷ್ಟು; ಅವುಗಳನ್ನು ಯಾರು ನಿರ್ವಹಿಸುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಒಟ್ಟು 275 ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕಗಳನ್ನು ವಿತರಿಸಲಾಗಿದ್ದು, ಇವುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಸೇವಾ ಪೂರೈಕೆದಾರರಾದ M/s Eduspark International Private Limited Maharastra ರವರ ಮುಖಾಂತರ ನಿರ್ವಹಿಸಲಾಗುತ್ತಿದೆ. ಜಿಲ್ಲಾವಾರು ವಿತರಿಸಲಾಗಿರುವ ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕಗಳ ವಿವರಗಳನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ. |
| ಊ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಸಂಚಾರಿ ಪಶು ಚಿಕಿತ್ಸಾ ಘಟಕಗಳೆಷ್ಟು; ಅವುಗಳನ್ನು ನಿರ್ವಹಿಸಲು ಅಗತ್ಯವಿರುವ ಪಶುವೈದ್ಯರು ಹಾಗೂ ಇತರ ಅಗತ್ಯ ಸಿಬ್ಬಂದಿಗಳು ಇದ್ದಾರೆಯೇ; ಈ ಘಟಕಗಳನ್ನು ಹೇಗೆ ಯಾರು ನಿರ್ವಹಿಸುತ್ತಿದ್ದಾರೆ? (ವಿವರ ನೀಡುವುದು) | ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದ Establishment and Strengthening of Veterinary Hospitals and Dispensaries (ESVHD) ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಗೆ 9 ಮತ್ತು ಉಡುಪಿ ಜಿಲ್ಲೆಗೆ 8 ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕಗಳನ್ನು ವಿತರಿಸಲಾಗಿರುತ್ತದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು 9 ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕದ ವಾಹನದಲ್ಲಿ 6 ಪಶುವೈದ್ಯರು, 9 ಪಶುವೈದ್ಯಕೀಯ ಅರೆತಾಂತ್ರಿಕ ಸಿಬ್ಬಂದಿ ಹಾಗೂ 9 ಡ್ರೈವರ್ ಕಮ್ ಅಟೆಂಡರ್‌ರವರು ಕಾರ್ಯನಿರ್ವಹಿಸುತ್ತಿರುತ್ತಾರೆ. |

| | | |
|---|---|---|
| | | ಉಡುಪಿ ಜಿಲ್ಲೆಯ ಒಟ್ಟು 8 ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕದ ವಾಹನದಲ್ಲಿ 7 ಪಶುವೈದ್ಯರು, 8 ಪಶುವೈದ್ಯಕೀಯ ಅರೆತಾಂತ್ರಿಕ ಸಿಬ್ಬಂದಿ ಹಾಗೂ 8 ಡ್ರೈವರ್ ಕಮ್ ಅಟೆಂಡರ್‌ರವರು ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>ಸಂಚಾರಿ ಪಶುಚಿಕಿತ್ಸಾ ವಾಹನ ಘಟಕಗಳ ಸೇವೆಗಳನ್ನು ಸೇವಾ ಪೂರೈಕೆದಾರರಾದ M/s Eduspark International Private Limited, Maharastra ರವರ ಮುಖಾಂತರ 1962 ಸಹಾಯವಾಣಿಯೊಂದಿಗೆ ನಿರ್ವಹಿಸಲಾಗುತ್ತಿದೆ. |

**ಇ-ಪಸಂಮೀ 244 ಸಲೆವಿ 2023**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

## ಅನುಬಂಧ-1

### ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ 2023-24 ನೇ ಸಾಲಿನಲ್ಲಿ ರೈತರಿಗಾಗಿ ರೂಪಿಸಲಾದ ಯೋಜನೆಗಳ ವಿವರ .

<table>
<tr><th>ಕ್ರ ಸಂ</th><th>ಕಾರ್ಯಕ್ರಮ</th><th>ವಿವರ</th></tr>
<tr><td></td><td colspan="2">ರಾಜ್ಯವಲಯದ ಕಾರ್ಯಕ್ರಮಗಳು</td></tr>
<tr><td>1</td><td>ಹಾಲು ಉತ್ಪಾದಕರಿಗೆ ಉತ್ತೇಜನ:</td><td>• ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್ ಗುಣಾತ್ಮಕ ಹಾಲಿಗೆ ರೂ 5/ ರಂತೆ ಪ್ರೋತ್ಸಾಹಧನ ಪಾವತಿ</td></tr>
<tr><td>2</td><td>ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ:</td><td>• 6+1 ಕುರಿ/ಮೇಕೆ ಘಟಕ ವಿತರಣೆ: ನಿಗಮದಲ್ಲಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ 6+1 ಕುರಿ/ಮೇಕೆ ಘಟಕ ವಿತರಣೆ.
<table>
<tr><th>ಘಟಕದವಿವರ ಗಳು</th><th>ಘಟಕದ ವೆಚ್ಚ</th><th>ಸಹಾಯಧನ ಶೇಕಡ 90%</th><th>ಫಲಾನುಭವಿ ವಂತಿಕೆ 10%</th></tr>
<tr><td>6+1 ಕುರಿ/ಮೇಕೆ ಘಟಕ ವಿತರಣೆ</td><td>ರೂ.45000/</td><td>ರೂ.40500/-</td><td>ರೂ.4500/-</td></tr>
</table>
• ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ: ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರುಗಳಿಗೆ 20+1 ಕುರಿ/ಮೇಕೆ ಘಟಕಗಳನ್ನು ಒದಗಿಸಲಾಗುವುದು.
<table>
<tr><th>ಘಟಕ ವೆಚ್ಚ</th><th>ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (NCDC), ಸಹಕಾರ ಇಲಾಖೆ, ಭಾರತ ಸರ್ಕಾರದ ವತಿಯಿಂದ ಸಾಲ ( ಶೇ 50 ರಷ್ಟು)</th><th>ರಾಜ್ಯ ಸರ್ಕಾರದ ಸಹಾಯಧನ (ಶೇ.25 ರಷ್ಟು)</th><th>ಫಲಾನುಭವಿ ವಂತಿಕೆ (ಶೇ.25 ರಷ್ಟು)</th></tr>
<tr><td>ರೂ.175000/-</td><td>ರೂ.87500/-</td><td>ರೂ.43750/-</td><td>ರೂ.43750/-</td></tr>
</table>
• ಸಣ್ಣ ಪ್ರಾಣಿಗಳ ಆಕಸ್ಮಿಕ ಸಾವಿಗೆ ಆಪತ್ತು ನಿಧಿ :<br>ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ 6 ತಿಂಗಳು ಮೇಲ್ಪಟ್ಟ ಕುರಿ ಮತ್ತು ಮೇಕೆ ಆಕಸ್ಮಿಕ ಅಥವಾ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ /ಮೇಕೆ ಗೆ ರೂ. 5000/- ಪರಿಹಾರ ಧನ ಹಾಗೂ 3-6 ತಿಂಗಳ ವಯಸ್ಸಿನ ಕುರಿ ಮತ್ತು ಮೇಕೆಗಳ ಆಕಸ್ಮಿಕ ಮರಣಕ್ಕೆ ರೂ. 3500/- ಪರಿಹಾರ ಧನ ಒದಗಿಸಲಾಗುವುದು.</td></tr>
<tr><td>3</td><td>ಲಸಿಕಾ ಕಾರ್ಯಕ್ರಮ</td><td>• ಗುರುತಿಸಲ್ಪಟ್ಟ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕುವುದು.<br>• ಕಾಲುಬಾಯಿಜ್ವರ, ಕಂದುರೋಗ, ಪಿಪಿಆರ್ ಮತ್ತು ಹಂದಿ ಜ್ವರ ರೋಗದ ವಿರುದ್ಧ ಲಸಿಕಾ ಕಾರ್ಯಕ್ರಮಕ್ಕೆ ಶೇ. 100 ಕೇಂದ್ರದ ಅನುದಾನ<br>• ಆಸ್ಕಾಡ್ ಯೋಜನೆಯಡಿಯಲ್ಲಿ ಶೇ. 60 ಕೇಂದ್ರದ ಪಾಲು ಹಾಗೂ ಶೇ. 40 ರಾಜ್ಯದ ಪಾಲು ಅನುದಾನದಲ್ಲಿ ಗಳಲೇರೋಗ, , ಕರುಳುಬೇನೆ, ಚರ್ಮಗಂಟು ರೋಗ, ಹುಚ್ಚುನಾಯಿ ರೋಗಗಳ ವಿರುದ್ಧ ಲಸಿಕೆ ಹಾಕುವುದು.</td></tr>
<tr><td>4</td><td>ರಾಷ್ಟ್ರೀಯ ಜಾನುವಾರು ಮಿಷನ್ (ಕೇಂದ್ರ ಪುರಸ್ಕೃತ ಯೋಜನೆ):</td><td>• ವಿಪತ್ತು ನಿರ್ವಹಣೆ-ಜಾನುವಾರು ವಿಮಾ ಯೋಜನೆ,</td></tr>
</table>

<table>
<tr><td>5</td><td>ಚರ್ಮಗಂಟು ರೋಗದಿಂದ ಮರಣ ಹೊಂದಿದ ರಾಸುಗಳಿಗೆ ಪರಿಹಾರಧನ:</td><td>• ಚರ್ಮಗಂಟು ರೋಗದಿಂದ ಮರಣ ಹೊಂದಿದ ರಾಸುಗಳಿಗೆ ಅವುಗಳ ಮಾಲೀಕರಿಗೆ ಪರಿಹಾರಧನ ವಿತರಿಸಲಾಗಿದೆ.</td></tr>
<tr><td>6</td><td>ರಾಸುಗಳ ಆಕಸ್ಮಿಕ ಆಪತ್ತು ನಿಧಿ:</td><td>• ರಾಸುಗಳು ಆಕಸ್ಮಿಕ ಮರಣ ಹೊಂದಿದಾಗ ರೈತರಿಗೆ ಉಂಟಾಗುವ ಆರ್ಥಿಕ ನಷ್ಟವನ್ನು ಆಂಶಿಕವಾಗಿ ಭರಿಸಲು ಮರಣ ಹೊಂದಿದ ದನ, ಎಮ್ಮೆ, ಎತ್ತು, ಹೋರಿ, ಕಡಸು, ಮತ್ತು ಮಣಕಗಳಿಗೆ ರೂ.10,000/- ಪರಿಹಾರಧನವನ್ನು ರಾಸುಗಳ ಮಾಲೀಕರಿಗೆ ವಿತರಿಸಲಾಗುವುದು.</td></tr>
<tr><td>7</td><td>ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ:</td><td>• ಆರ್.ಕೆ. ವಿ. ವೈ. ಯೋಜನೆಯಡಿ ಕೃಷಿ ಕೂಲಿ ಕಾರ್ಮಿಕರಿಗೆ ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತ ರೈತರಿಗೆ ಒಂದು ಮಿಶ್ರ ತಳಿ ಹಾಲು ಕರೆಯುವ ಹಸು ಘಟಕದ ವಿತರಣೆ
<table>
<tr><td rowspan="2">ಕ್ರ ಸಂ</td><td rowspan="2">ಘಟಕದ ವಿವರ</td><td rowspan="2">ಘಟಕದ ಮೊತ್ತ</td><td colspan="2">ಸಹಾಯಧನ</td></tr>
<tr><td>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು ಶೇ.33.33</td><td>ಸಾಮಾನ್ಯ ವರ್ಗ ಶೇ.25</td></tr>
<tr><td>1</td><td>ಹೈನುಗಾರಿಕೆ ಘಟಕ : ಒಂದು ಮಿಶ್ರ ತಳಿ ಹಾಲು ಕರೆಯುವ ಹಸು</td><td>ರೂ. 62000/-</td><td>ರೂ. 20665/-</td><td>ರೂ. 15500/-</td></tr>
<tr><td></td><td colspan="4">ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಫಲಾನುಭವಿಗಳಿಗೆ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು</td></tr>
</table></td></tr>
<tr><td>8</td><td>ಕೃತಕ ಗರ್ಭಧಾರಣೆ:</td><td>• ರಾಜ್ಯದಲ್ಲಿ ಕೃತಕ ಗರ್ಭಧಾರಣಾ ಕಾರ್ಯಕ್ರಮವು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು 4234 ಪಶುವೈದ್ಯ ಸಂಸ್ಥೆಗಳಲ್ಲಿ ಪ್ರತಿನಿತ್ಯ ಕೃತಕ ಗರ್ಭಧಾರಣೆ ಕೈಗೊಳ್ಳಲಾಗುತ್ತಿದೆ.</td></tr>
<tr><td>9</td><td>ಹೈನುಘಟಕ ವಿತರಣೆ</td><td>• ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾಗುವ ಅನುದಾನದಲ್ಲಿ ಒಂದು ಮಿಶ್ರತಳಿ ಹಸು ಘಟಕವನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿತರಿಸಲಾಗುವುದು.
<table>
<tr><td rowspan="2">ಕ್ರ ಸಂ</td><td rowspan="2">ಘಟಕದ ವಿವರ</td><td rowspan="2">ಘಟಕದ ಮೊತ್ತ</td><td>ಸಹಾಯಧನ</td></tr>
<tr><td>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು ಶೇ.90</td></tr>
<tr><td>1</td><td>ಹೈನು ಘಟಕ : ಒಂದು ಮಿಶ್ರ ತಳಿ ಹಸು</td><td>ರೂ. 65000/-</td><td>ರೂ. 58500/-</td></tr>
<tr><td></td><td colspan="3">ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತವನ್ನು ಫಲಾನುಭವಿಗಳಿಗೆ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು</td></tr>
</table></td></tr>
<tr><td>10</td><td>ಸುಸಜ್ಜಿತ ಸಂಚಾರಿ ಪಶುಚಿಕಿತ್ಸಾ ವಾಹನ</td><td>• ರೈತರ ಮನೆಬಾಗಿಲಿಗೆ ತುರ್ತು ಪಶುವೈದ್ಯಕೀಯ ಸೇವೆಯನ್ನು ನೀಡಲು 290 ಸುಸಜ್ಜಿತ ಸಂಚಾರಿ ಪಶುಚಿಕಿತ್ಸಾ ವಾಹನಗಳನ್ನು ಒದಗಿಸಲಾಗಿರುತ್ತದೆ. ಜಾನುವಾರು ಚಿಕಿತ್ಸೆ ಅಗತ್ಯವಿರುವ ಜಾನುವಾರು ಮಾಲೀಕರು ಸಹಾಯವಾಣಿ ಸಂಖ್ಯೆ 1962 ಕ್ಕೆ ಕರೆಮಾಡಿ ಅಗತ್ಯ ಸೇವೆಗಳನ್ನು ಪಡೆಯಬಹುದಾಗಿದೆ.</td></tr>
<tr><td>11</td><td>ಪ್ರಾಣಿ ಕಲ್ಯಾಣ ಸಹಾಯವಾಣಿ:</td><td>• ಜಾನುವಾರುಗಳಿಗೆ 24/7 ನಿರಂತರ ಸೇವೆಯನ್ನು ಒದಗಿಸಲು ಪ್ರಾಣಿ ಕಲ್ಯಾಣ ಸಹಾಯವಾಣಿ ಸಂಖ್ಯೆ 8277100200 ಯನ್ನು ಕಲ್ಪಿಸಲಾಗಿದ್ದು ರೈತರು ಸಹಾಯವಾಣಿಯನ್ನು ಸಂಪರ್ಕಿಸಿ ಇಲಾಖೆಯ ತಾಂತ್ರಿಕ ಸೇವೆ ಪಡೆಯಬಹುದಾಗಿದೆ.</td></tr>
</table>

ಅನುಬಂಧ-2

**ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿನ ಜಿಲ್ಲೆಗಳ ಸಂಚಾರಿ ಪಶು ಚಿಕಿತ್ಸಾ ವಾಹನ ಘಟಕಗಳ ಪಟ್ಟಿ:**

| ಕ್ರ.ಸಂ. | ಜಿಲ್ಲೆಗಳ ಹೆಸರು | ವಿತರಿಸಲಾದ ಸಂಚಾರಿ ವಾಹನ ಘಟಕಗಳು |
|---|---|---|
| 1 | Bangalore Urban | 8 |
| 2 | Bangalore Rural | 5 |
| 3 | Chitradurga | 9 |
| 4 | Chikkaballapura | 8 |
| 5 | Davanagere | 7 |
| 6 | Kolara | 7 |
| 7 | Ramanagara | 6 |
| 8 | Shivamogga | 7 |
| 9 | Tumakuru | 13 |
| | **TOTAL** | **70** |
| 1 | Chamaraja Nagar | 6 |
| 2 | Chikkamagaluru | 10 |
| 3 | Dakshina Kannada | 9 |
| 4 | Hassan | 9 |
| 5 | Kodagu | 6 |
| 6 | Mysore | 10 |
| 7 | Mandya | 7 |
| 8 | Udupi | 8 |
| | **TOTAL** | **65** |
| 1 | Belagavi | 17 |
| 2 | Bagalakote | 13 |
| 3 | Dharwara | 8 |
| 4 | Gadag | 8 |
| 5 | Haveri | 9 |
| 6 | Uttara Kannada | 13 |
| 7 | Vijayapura | 14 |
| | **TOTAL** | **82** |
| 1 | Bellary | 6 |
| | Vijayanagara | 8 |
| 2 | Bidar | 8 |
| 3 | Koppal | 8 |
| 4 | Kalburgi | 11 |
| 5 | Raichur | 9 |
| 6 | Yadgiri | 8 |
| | **TOTAL** | **58** |
| | **GTotal** | **275** |